ಪ್ರಕಟಣೆ

ಸದಸ್ಯರ ಗೈರುಹಾಜರಿಗೆ ಅನುಮತಿ ಕೋರಿಕೆ

ಅಧ್ಯಕ್ಷರು. — ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ತಮ್ಮ ಮಗನ ಅನಾರೋಗ್ಯದ ಕಾರಣವಾಗಿ ಮೇ ತಿಂಗಳ ಕೊನೆಯವರೆಗೆ ವಿಧಾನ ಸಭಾ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್‌ರವರಿಗೆ ವಿಧಾನ ಸಭೆಯು ಮೇ ತಿಂಗಳ ಅಂತ್ಯದವರೆಗೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

(ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು. — ಗೈರು ಹಾಜರಾಗಲು ಶ್ರೀ ಎಂ.ಎಸ್. ಕೃಷ್ಣನ್‌ರವರಿಗೆ ಅನುಮತಿ ನೀಡಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ. — ಮಾನ್ಯ ಅಧ್ಯಕ್ಷರೇ, ಈಗ ಸ್ವಲ್ಪ ಹೊತ್ತಿಗೆ ಮುಂಚೆ ಅಡ್ಜರ್ನ್‌ಮೆಂಟ್ ಮೋಷನ್ ವಿಚಾರದಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಬೇಕೆಂದು ಅಪೇಕ್ಷೆ ಪಟ್ಟಿದ್ದೆವು ನಿಲುವಳಿ ಸೂಚನೆ ಮುಖಾಂತರ ಪುನ: ಪರಿಶೀಲನೆ ಮಾಡಿ ಚರ್ಚೆಗೆ ಅನುವು ಮಾಡಿಕೊಡಿ ಎಂದೂ ಕೇಳುತ್ತೇನೆ.

ಅಧ್ಯಕ್ಷರು. — ನಾನು ಎರಡೂ ಕಡೆಯ ವಾದವನ್ನು ಕೇಳಿ, ಇದರ ಬಗ್ಗೆ ಚರ್ಚೆಗೆ ಅನುಮತಿಯನ್ನು ನಿರಾಕರಣ ಮಾಡಿದ್ದೇನೆ. ಆದಾಗ್ಯೂ ಇದನ್ನು ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ. — ಬೇರೆ ರೂಪ ಎಂದರೆ ಯಾವ ರೀತಿ ?

ಅಧ್ಯಕ್ಷರು. — ನಿಯಮ ೬೮ರ ಪ್ರಕಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಟೈಮ್ ಮತ್ತು ಡೇಟ್ ಹೇಳಿದರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು. — ರೂಲ್ ೬೮ರ ಪ್ರಕಾರ ಬೇಕಾದರೆ ಮಾಡಿ.

ಶ್ರೀ ಎಸ್. ಬಂಗಾರಪ್ಪ. — ಬೇಕಾದರೆ ಮಾಡಿ ಎಂದರೆ ಏನು ?

ಅಧ್ಯಕ್ಷರು. — ನಿಮಗೆ ಬೇಕಾಗಿರುವುದು ಅವಕಾಶ, ನಾನು ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ. — ಯಾವ ರೀತಿ ಮಾಡಬೇಕು ಎಂದು ಈ ಸದನಕ್ಕೆ ಗೊತ್ತಾಗಬೇಕು, ಬೇಕಾದರೆ ಎಂದು ಇಲ್ಲ.

ಅಧ್ಯಕ್ಷರು — ರೂಲ್ ೬೮ರ ಕೆಳಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ. — ಯಾವಾಗ ಸ್ವಾಮಿ, ನಾಳೆ ಅಥವಾ ನಾಡಿದ್ದೆ ಮಾಡಿಕೊಡಿ.

ಅಧ್ಯಕ್ಷರು. — ಸಭಾನಾಯಕರೇ, ಇದನ್ನು ರೂಲ್ ೬೮ರ ಪ್ರಕಾರ ಇಡಬಹುದಲ್ಲ.

ಶ್ರೀ ರಾಮಕೃಷ್ಣ ಹೆಗಡೆ. — ನನ್ನ ಆಕ್ಷೇಪ ಏನೂ ಇಲ್ಲ.

ಅಧ್ಯಕ್ಷರು. — ಅವರು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡಿದ್ದಾರೆ. ಈಗ ದೇಶಪಾಂಡೆಯವರು ಡಿಮ್ಯಾಂಡ್ ಅನ್ನು ಮೂವ್ ಮಾಡಲಿ.

ಶ್ರೀ ಎಂ. ಎನ್. ಆಡ್ಯಂತಾಯ. — ಅಧ್ಯಕ್ಷರೇ, ನಮಗೂ ಸ್ವಲ್ಪ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು. — ರೂಲ್ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾವಪ್ಪ. — ನಾನು ಸಹಿ ಕೊಟ್ಟಿದ್ದೆ, ಅದು ಏನು ಆಯಿತು, ನಾಳೆ ಪಾಕಂತ್ತೀರಾ ?

ಅಧ್ಯಕ್ಷರು. — ಅದನ್ನು ನಾಳೆಗೆ ಹಾಕಂತ್ತೇನೆ.